RNU AIR DHARWAD

JULY 14, 2026

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಇಂದು ಮಣ್ಣೆತ್ತಿನ ಅಮಾವಾಸ್ಯೆ.** ಉತ್ತರ ಕರ್ನಾಟಕ ಭಾಗದಲ್ಲಿ, ಮಣ್ಣೆತ್ತುಗಳನ್ನು ಪೂಜಿಸಿ, ಕೃಷಿ ಉಪಕರಣಗಳಿಗೆ ಪೂಜೆ ಸಲ್ಲಿಸಿ, ನೈವೇದ್ಯ ಸಮರ್ಪಿಸಿ, ಮಣ್ಣು ಪೂಜೆಯ ಗ್ರಾಮೀಣ ಸೊಗಡಿನ ಹಬ್ಬವನ್ನು, ವಿಶೇಷವಾಗಿ ಆಚರಿಸಲಾಗುತ್ತಿದೆ.

<><><>

**ಆಗಸ್ಟ್ 6 ರಿಂದ,** ವಿಧಾನಮಂಡಲ ಮಳೆಗಾಲದ ಅಧಿವೇಶನ ಆರಂಭವಾಗಲಿದೆ. ಮೊದಲ ದಿನ, ಹಂಗಾಮಿ ಸಭಾಧ್ಯಕ್ಷರಾಗಿರುವ, ವಿಧಾನಸಭೆ ಉಪ ಸಭಾಧ್ಯಕ್ಷರ ಅಧ್ಯಕ್ಷತೆಯಲ್ಲಿ, ಸಭಾಧ್ಯಕ್ಷರ ಆಯ್ಕೆಗೆ ಚುನಾವಣೆ ನಡೆಯಲಿದೆ. ಸಂತಾಪ ಸೂಚಕ ಸಭೆ ನಡೆಯಲಿದ್ದು, ಆಗಸ್ಟ್ 10 ರಿಂದ ಸಭೆಯ ಕಾರ್ಯಕಲಾಪ ಆರಂಭವಾಗಲಿದೆ. ಆಗಸ್ಟ್ 14 ಅಥವಾ 21ರ ವರೆಗೆ, ಅಧಿವೇಶನ ನಡೆಸುವ ಬಗ್ಗೆ, ವಿಧಾನಸಭೆ ಸಚಿವಾಲಯ ತೀರ್ಮಾನಿಸಿ, ಶಾಸಕರಿಂದ ಪ್ರಶ್ನೆಗಳನ್ನು ಪಡೆಯಲು, ಸೂಚನೆ ಹೊರಡಿಸಲಿದೆ ಎಂದು, ಸುದ್ದಿಸಂಸ್ಥೆ ತಿಳಿಸಿದೆ.

<><><>

**ಬೆಂಗಳೂರು ವಿಭಾಗ ಮಟ್ಟದ,** ಬರ ಪರಿಶೀಲನಾ ಸಭೆಯನ್ನು, ಈ ತಿಂಗಳ 25ನೇ ತಾರೀಖು, ಚಿತ್ರದುರ್ಗದಲ್ಲಿ ನಡೆಸಲು, ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ನಿರ್ಧರಿಸಿದ್ದಾರೆ. ಮುಖ್ಯಮಂತ್ರಿಯವರ ಅಪರ ಕಾರ್ಯದರ್ಶಿ, ತುಷಾರ ಗಿರಿನಾಥ ಇಂದು ಚಿತ್ರದುರ್ಗಕ್ಕೆ ಭೇಟಿ ನೀಡಿ, ಸಭಾಂಗಣ ಪರಿಶೀಲಿಸಲಿದ್ದಾರೆ. 26ನೇ ತಾರೀಖು, ಹಿರಿಯೂರಿನಲ್ಲಿ, ಮಾಜಿ ಸಚಿವ ಡಿ. ಸುಧಾಕರ ನುಡಿನಮನ ಆಯೋಜಿಸಲು, ಮುಖ್ಯಮಂತ್ರಿ ಸೂಚಿಸಿದ್ದಾರೆ.

<><><>

**ಹಿರಿಯ ಬಿಜೆಪಿ ನಾಯಕ ಹಾಗೂ ಮಾಜಿ ಸಚಿವ,** ರಾಮಚಂದ್ರ ಗೌಡ ಬೆಂಗಳೂರಿನಲ್ಲಿ ನಿಧನರಾಗಿದ್ದಾರೆ. ಅವರಿಗೆ 88 ವರ್ಷ, ವಯಸ್ಸಾಗಿತ್ತು. ಅಗಲಿದ ಹಿರಿಯ ನಾಯಕನಿಗೆ, ಅವರ ನಿವಾಸದಲ್ಲಿ ಅನೇಕ ಗಣ್ಯರು, ಗೌರವ ನಮನ ಸಲ್ಲಿಸುತ್ತಿದ್ದಾರೆ.

<><><>

**ಧಾರವಾಡ, ಕರ್ನಾಟಕ** ವಿದ್ಯಾವರ್ಧಕ ಸಂಘದ, ಕಲಾ ಹಾಗೂ ಜಾನಪದ ಮಂಟಪ, ಇಂದು ಸಂಜೆ 6 ಗಂಟೆಗೆ, ರಾ.ಹ.ದೇಶಪಾಂಡೆ ಸಭಾಭವನದಲ್ಲಿ, 'ಜೋಗಿ ಬುಡಕಟ್ಟು ಸಮುದಾಯದ ಅಸ್ಮಿತೆ' ವಿಷಯದ ಕುರಿತು, ವಿಶೇಷ ಉಪನ್ಯಾಸ ಆಯೋಜಿಸಿದೆ. ಹಾವೇರಿ ಜಿಲ್ಲೆ, ಶಿಗ್ಗಾಂವಿಯ ಗೋಟಗೋಡಿ ಜಾನಪದ ವಿಶ್ವವಿದ್ಯಾಲಯದ, ತಾತ್ಕಾಲಿಕ, ಸಹಾಯಕ ಪ್ರಾಧ್ಯಾಪಕ, ಡಾಕ್ಟರ್ ಬಿ.ಎಚ್. ಆನಂದಪ್ಪ ಜೋಗಿ, ವಿಶೇಷ ಉಪನ್ಯಾಸ ನೀಡಲಿದ್ದಾರೆ. ಜೋಗಿ ಸಮುದಾಯದಿಂದ, ಪ್ರಥಮ ಪಿ.ಎಚ್.ಡಿ. ಸಂಪಾದಿಸಿದ ಹೆಗ್ಗಳಿಕೆಯ, ವಿದ್ವಾಂಸ ಡಾಕ್ಟರ್ ಆನಂದಪ್ಪ ಜೋಗಿ, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

**ಡಾ. ಆನಂದಪ್ಪ ಜೋಗಿ ಧ್ವನಿ 45 ಸೆಕೆಂದುಗಳು**

<><><>

**ಕಲಬುರಗಿ ಜಿಲ್ಲೆಯಾದ್ಯಂತ,** ಮಳೆ ಪ್ರಮಾಣ ಕುಂಠಿತಗೊಂಡಿದ್ದು, ಅಲ್ಪಾವಧಿ ಬೆಳೆಗಳನ್ನು ಆಯ್ದುಕೊಳ್ಳುವಂತೆ, ತೋಟಗಾರಿಕೆ ಇಲಾಖೆ, ಜಂಟಿ ನಿರ್ದೇಶಕರು, ರೈತರಲ್ಲಿ ಮನವಿ ಮಾಡಿದ್ದಾರೆ. ಈ ತಿಂಗಳ ಮಧ್ಯದಲ್ಲಿ ಅಥವಾ ಕೊನೆಯಲ್ಲಿ ಮಳೆಯಾದರೆ, "ಕೃಷ್ಣ ಪ್ರಭಾ ರುದ್ರ" ಮೆಣಸಿನಕಾಯಿ ಸಸಿ ತಯಾರಿಸಿ, ನಾಟಿ ಮಾಡಬಹುದು, ಈರುಳ್ಳಿಯ ಅಲ್ಪಾವಧಿ ತಳಿ, "ಭೀಮಾ ರೆಡ್" ಸಹ ಬಿತ್ತನೆ ಮಾಡಬಹುದು. ಹನಿ ನೀರಾವರಿ ಪದ್ಧತಿಯಲ್ಲಿ ಕೃಷಿ ಕೈಗೊಂಡು, ನೀರು ಆವಿಯಾಗುವುದನ್ನು ತಡೆಯಲು, ಬೆಳಗ್ಗೆ ಅಥವಾ ಸಂಜೆ ವೇಳೆ ಮಾತ್ರ, ನೀರು ಹಾಯಿಸುವಂತೆ ಹಾಗೂ ಕೃಷಿ ಹೊಂಡ, ಕೊಳವೆ ಬಾವಿಗಳನ್ನು ಹಿತಮಿತವಾಗಿ ಬಳಸುವಂತೆ, ಕೋರಿದ್ದಾರೆ.

<><><>

**ಮತದಾರ ಪಟ್ಟಿಯ ವಿಶೇಷ ಸಮಗ್ರ** ಪರಿಷ್ಕರಣೆ ಹಿನ್ನೆಲೆ, ಮತದಾರರ ಅನುಕೂಲಕ್ಕಾಗಿ, 452 ಮತದಾರರ ಸೌಲಭ್ಯ ಕೇಂದ್ರಗಳನ್ನು ಸ್ಥಾಪಿಸಲಾಗಿದೆ ಎಂದು, ಧಾರವಾಡ ಜಿಲ್ಲಾಧಿಕಾರಿ, ಆರ್.ಸ್ನೇಹಲ್, ತಿಳಿಸಿದ್ದಾರೆ. ವಿಧಾನಸಭಾ ಕ್ಷೇತ್ರವಾರು, ಸಾವಿರದ 665 ಮತಗಟ್ಟೆಗಳಿದ್ದು, 452 ಕೇಂದ್ರಗಳನ್ನು ತೆರೆಯಲಾಗಿದೆ ಎಂದು, ತಮ್ಮ ಕಚೇರಿಯಲ್ಲಿ ಆಯೋಜಿಸಿದ್ದ, ಸುದ್ದಿಗೋಷ್ಠಿಯಲ್ಲಿ ಅವರು ಮಾಹಿತಿ ನೀಡಿದರು. ಶೇಕಡ 93 ದಶಾಂಶ 6–9ರಷ್ಟು, ಗಣತಿ ನಮೂನೆಗಳನ್ನು, ಜಿಲ್ಲೆಯಾದ್ಯಂತ ಈ ವರೆಗೆ ವಿತರಿಸಲಾಗಿದೆ. ಆ ಪೈಕಿ, ಶೇಕಡ 20 ದಶಾಂಶ 5–8ರಷ್ಟು ಗಣತಿ ನಮೂನೆಗಳನ್ನು, ಡಿಜಿಟಲೀಕರಿಸಲಾಗಿದೆ, ಎಂದರು.

<><><>

**ಉತ್ತರಕನ್ನಡ ಜಿಲ್ಲೆ, ಸ್ವೀಪ್ ಸಮಿತಿ,** ಮುಂಡಗೋಡದ ವಾರದ ಸಂತೆ ಮಾರುಕಟ್ಟೆ ಹಾಗೂ ಗ್ರಾಮೀಣ ಭಾಗದ ಮಾರುಕಟ್ಟೆಯಲ್ಲಿ, ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಜನ ಜಾಗೃತಿ ಕಾರ್ಯಕ್ರಮಕ್ಕೆ, ತಾಲೂಕು ಪಂಚಾಯಿತಿ, ಕಾರ್ಯನಿರ್ವಾಹಕ ಅಧಿಕಾರಿ, ಟಿ.ವಾಯ್. ದಾಸನಕೊಪ್ಪ ಚಾಲನೆ ನೀಡಿದರು.

<><><>

**ಕುರಿಗಾಹಿಗಳು, ಕುರಿ ಮತ್ತು ಮೇಕೆ ತಳಿ ಅಭಿವೃದ್ಧಿಗಾಗಿ,** ರಾಜ್ಯ ಸರ್ಕಾರ ಮೀಸಲಿರಿಸಿದ, ಹಾವೇರಿ ತಾಲೂಕು, ಗುತ್ತಲದ ಕುರಿ ಸಂವರ್ಧನಾ ಕೇಂದ್ರದ ಜಾಗೆಯನ್ನು, ಸೌರಶಕ್ತಿ ಘಟಕಕ್ಕಾಗಿ, ಖಾಸಗಿ ಕಂಪೆನಿಗೆ ನೀಡಬಾರದು ಎಂದು, ರಾಜ್ಯಸಭೆ ಸಂಸದ, ಪ್ರೊಫೆಸರ್ ಮಾ.ನಾಗರಾಜ, ರಾಜ್ಯ ಸರ್ಕಾರವನ್ನು ಆಗ್ರಹಿಸಿದ್ದಾರೆ.

<><><>

**ಕೇಂದ್ರ ಯುವಜನ ವ್ಯವಹಾರ ಹಾಗೂ ಕ್ರೀಡಾ ಸಚಿವಾಲಯ,** ಮೇರಾ ಯುವ ಭಾರತ್ ಸಹಯೋಗದಲ್ಲಿ, ವಿಕಸಿತ ಭಾರತಕ್ಕಾಗಿ, ನಶಾ ಮುಕ್ತ ಯುವಜನತೆ ಅಭಿಯಾನದ ಸ್ಪರ್ಧೆಗಳಿಗೆ, ಇಂದಿನಿಂದ ಮೈ ಭಾರತ್ ಪೋರ್ಟಲ್‌ನಲ್ಲಿ ನೋಂದಣಿ ಆರಂಭಿಸಿದೆ. ಜಿಲ್ಲೆ, ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ, 5 ವಿಭಾಗಗಳಲ್ಲಿ ಸ್ಪರ್ಧೆಗಳು ನಡೆಯಲಿವೆ. ಜಿಲ್ಲಾ ಮಟ್ಟದ ಸ್ಪರ್ಧೆಗಳು, ಈ ತಿಂಗಳ 24 ರಿಂದ 27ರ ವರೆಗೆ, ಆಯೋಜಿತವಾಗಿವೆ. ಆಗಸ್ಟ್ 12 ಮತ್ತು 13 ರಂದು, ಹೊಸ ದಿಲ್ಲಿಯ, ರಾಷ್ಟ್ರೀಯ ಯುವ ಶೃಂಗಸಭೆ, ಜರುಗಲಿದೆ.

**ಹರ್ಷ/ಉಮೇಶ/ನ್ಯೂಸ್ ಆನ್ ಏರ್/ಎಕ್ಸ್ ಖಾತೆ**

<><><>

**ಭಾರತದ, ಆರೋಗ್ಯ ಸಂಶೋಧನಾ** ವ್ಯವಸ್ಥೆಯನ್ನು ಬಲಪಡಿಸಿ, ಕಾರ್ಯತಂತ್ರದ ಚೌಕಟ್ಟನ್ನು ರೂಪಿಸಲು, ಕೇಂದ್ರ ಆರೋಗ್ಯ ಸಚಿವಾಲಯ, 'ರಾಷ್ಟ್ರೀಯ ಆರೋಗ್ಯ ಸಂಶೋಧನಾ ನೀತಿಯ, ಕರಡ'ನ್ನು ಪ್ರಕಟಿಸಿದೆ. ಸಾರ್ವಜನಿಕರು ಹಾಗೂ ತಜ್ಞರಿಂದ ಸಲಹೆಗಳನ್ನು ಆಹ್ವಾನಿಸಿದೆ. ಈ ತಿಂಗಳ 27ನೇ ತಾರೀಖಿನೊಳಗೆ, ಸಲಹೆಗಳನ್ನು ಸಲ್ಲಿಸಬಹುದು.

<><><>

**ಶಿವಮೊಗ್ಗದ ನವುಲೆಯ,** ಕೃಷಿ ಮಹಾವಿದ್ಯಾಲಯದ ಆವರಣದ ಬೇಕರಿ ಘಟಕದಲ್ಲಿ, ವಿವಿಧ ರೀತಿಯ ಬೇಕರಿ ಉತ್ಪನ್ನಗಳ ತಯಾರಿಕೆ ಕುರಿತು, ಈ ತಿಂಗಳ 20 ರಿಂದ ಒಂದು ತಿಂಗಳ ಕೌಶಲ್ಯಾಭಿವೃದ್ಧಿ ತರಬೇತಿ ನಡೆಯಲಿದೆ.

4 ಸಾವಿರದ 500 ರೂಪಾಯಿ ಶುಲ್ಕ ನಿಗದಿಪಡಿಸಲಾಗಿದೆ ಎಂದು, ಕೃಷಿ ಮಹಾವಿದ್ಯಾಲಯ, ತಿಳಿಸಿದೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.**